# ‘ಕಾರ್ವಿಂಗ್’ ಕಲೆಗಾರ

■ ಚಿತ್ರ– ಬರಹ:
**ಪುತ್ತರಿರ ಕರುಣ್ ಕಾಳಯ್ಯ**

ಚೆಟ್ಟಳ್ಳಿಯ ಅನಿಶ್ ಪ್ರತಿಭಾವಂತ ಯುವ ಕಾರ್ವಿಂಗ್ (ಕೆತ್ತನೆ)ಕಲೆಗಾರ. ಎಳೆಯ ವಯಸ್ಸಿನ ಈತನ ಸಾಧನೆಯನ್ನು ನೋಡಿ ಬೆರಗಾಗದವರೇ ಇಲ್ಲ.

ಚೇರಳಶ್ರೀಮಂಗಲ ಗ್ರಾಮದ ಚೆಟ್ಟಳ್ಳಿಯ ಕಂಡಕರೆ(ನೆಲ್ಲಿಹಡ್ಲು)ಯ ಈ ಮಲಯಾಳಿ ಹುಡುಗ ಮಾದಾಪುರದ ಜೂನಿಯರ್ ಕಾಲೇಜಿನಲ್ಲಿ ಪಿಯು ಮುಗಿಸುವಾಗಲೇ ಕೆತ್ತನೆ ಕಲೆಯ ಹುಚ್ಚು ಅಂಟಿಸಿಕೊಂಡಿದ್ದ. ಆದರೆ ಕಲಿಸುವವರು ಇರಲಿಲ್ಲ. ಒಮ್ಮೆ ಮನೆ ಹತ್ತಿರದ ಅಯ್ಯಪ್ಪ ದೇವಾಲಯದ









ಗಣಪತಿ ಗುಡಿ ನಿರ್ಮಾಣಕ್ಕೆ ಬಂದ ಕೆತ್ತನೆಗಾರ ಮಾಲ್ದಾರೆಯ ದುರ್ಗಾ–ಪ್ರಸಾದ್ ಪರಿಚಯವಾಯಿತು. ಅವರು ಕಲಿಸಲು ಒಪ್ಪಿಕೊಂಡರು. ಅವರ ಜತೆಗೆ ರಮೇಶ್ ಕೂಡಾ ಗುರುವಾದರು. ಆ ಬಳಿಕ ಪೊನ್ನಂಪೇಟೆಯ ಸಾಬುರವರೊಂದಿಗೆ 3 ವರ್ಷಗಳ ಕಾಲ ಮರದಿಂದ ಮೂರ್ತಿಗಳ ಕೆತ್ತನೆ, ಮಾಡೆಲ್‌ಗಳ ತಯಾರಿ ಮುಂದುವರಿಯಿತು. ಈಗ ನಾಲ್ಕು ವರ್ಷಗಳಿಂದ ಅನಿಶ್ ಸ್ವತಂತ್ರವಾಗಿ ಕೆತ್ತನೆ ಕೆಲಸ ಮಾಡುತ್ತಿದ್ದಾರೆ.

ಈಗ ಕೊಡಗಿನ ಹಲವು ದೇಗುಲಗಳಲ್ಲಿ ಈತನ ಕೆತ್ತನೆ ಮನಸೆಳೆಯುತ್ತಿದೆ. ಕೊಡಗಿನಲ್ಲಿ ದೊರೆಯುವ ಎಲ್ಲಾ ರೀತಿಯ ಮರದಲ್ಲೂ ಈತ ಕೆತ್ತನೆ ಕೆಲಸ ನಡೆಸಿದ್ದಾನೆ. ದೊಡ್ಡ ಹಲಸಿನ ಮರವೊಂದರ ಒಂದೇ ಬೇರಿನಲ್ಲಿ 13 ಡಾಲ್ಫಿನ್ ಮೀನುಗಳನ್ನು ಕೆತ್ತಿರುವುದು ವಿಶೇಷ. ಬಾಗಿಲ ವಿನ್ಯಾಸ, ಮರದ ಅನೆ,ಸಿಂಹ,ಜಿಂಕೆ, ಮೊಸಳೆಯ ಕೆತ್ತನೆ, ಗರುಡ ಹಕ್ಕಿಯೊಂದು ಹಾವನ್ನು ಹಿಡಿದ ಕೆತ್ತನೆ, ಮನೆಯ ಸೋಫಾಗಳಲ್ಲಿ ಕೆತ್ತಲ್ಪಟ್ಟ ಪ್ರಾಣಿಗಳ ಮುಖ, ದೇವಾಲಯದ ಮೇಲಿರುವ ಕೀರ್ತಿಮುಖ, ದೀಪಸ್ಥಂಭ– ಹೀಗೆ ಅನಿಶ್‌ಗೆ ಹೆಸರು ತಂದುಕೊಟ್ಟ ಕೆತ್ತನೆಗಳು ಹಲವಾರಿವೆ.